doc-189
T.P-4

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 148] ಬುಧವಾರ 13—2—46 [ಬಿಡಿ ಪ್ರತಿ 3 ಪೈ

ರಾಷ್ಟ್ರೀಯ ಸರ್ಕಾರವೇ ಮದ್ದು!

ವಿವಿಧ ವಿನೋದಾವಳಿಗಳ ಅವಾಂತರ

ಈಚೀಚೆಗೆ ನಮ್ಮ ಸಂಸ್ಥಾನದಲ್ಲಿ ವಿವಿಧ ವಿನೋದಾವಳಿಗಳು ಹೆಚ್ಚುತ್ತಿವೆ. ಇಷ್ಟೇ ಓದಿಕೊಂಡರೆ ಪಾಪಸ್ಸಿಗೆ ಸಂತೋಷವೇನೋ ಆಗುತ್ತೆ. ನಮ್ಮ ನಾಡಿನ ಜನ ಕಲಾರಾಧನೆಯಲ್ಲಿ ಘಟ್ಟಿಗರಾಗುತ್ತಿದ್ದಾರೆ ಎಂಬ ಭಾವನೆ ಬರುತ್ತದೆ. ಆದೇ ಸಂತೋಷ ಹುಟ್ಟಿಸುವುದು. ಆ ವಿನೋದಾವಳಿಗಳನ್ನು ಕಣ್ಣಾರೆ ನೋಡಿ, ಕಿವಿಯಾರೆ ಆಲಿಸಿದರೆ, ತುಂಬಾ ದುಃಖವಾಗುತ್ತೆ. ಏಕೆಂದರೆ ವ್ಯವಸ್ಥೆ ಶುದ್ಧ ಅವ್ಯವಸ್ಥೆ. ಮೊಟ್ಟ ಮೊದಲು 'ಷೋ' 'ಗ್ಯಾಪ್ಸ್' ಮಯ. ಎರಡನೇದು 'ಮೇಕಪ್' 'ಸ್ಟೇಜ್ ಆರೆಂಜ್‌ಮೆಂಟ್' ಇತ್ಯಾದಿಗಳನ್ನು ಅವಸರ ಅವಸರದಲ್ಲಿ ಗೃಗೆ ಸಿಕ್ಕಿದಷ್ಟರಲ್ಲೇ ಸರಿಪಡಿಸಿಕೊಂಡು ಉತ್ತಮ ಕಂತ ಸ್ವರೂಪ ತೋರಿಸುವುದು ಹೊಂಟು ಕಲೆಯ ಕೊಲೆಯಾಗುತ್ತಿದೆ.

ಈ ರೀತಿ ಇದರ ಮೇಲೆ ಉಪನ್ಯಾಸ ಈಗ ಬೇಡ. ಒಂದು ಉದಾಹರಣೆ ಸಾಕು. ಹಿಂದೆ ನಡೆದ ಪ್ರದರ್ಶನವೊಂದನ್ನು ಚಿತ್ರಿಸಿಕೊಳ್ಳುವುದಕ್ಕಿಂತ ನೆನ್ನೆಯ ಪ್ರದರ್ಶನ ಇನ್ನೂ ನಮ್ಮ ಸ್ಮೃತಿ ಪಥದಿಂದ ಇಂಗಿಲ್ಲವಾಗಿ ಅದನ್ನೇ ಉದಾಹರಣೆಗೆ ತೆಗೆದುಕೊಳ್ಳಬಹುದು. ನಿನ್ನೆ ಮೂರು ಚಿಕ್ಕ ಚಿಕ್ಕ ನಾಟಕಗಳೂ, ನಾಲ್ಕು ಡ್ಯಾನ್ಸುಗಳೂ ಎರಡು ಸಂಗೀತಗಳೂ ಆದವು. ಮೊದಲನೇ ನಾಟಕ 'ಹೀಕಲಾಟ' ಹೆಸರಿಗೂ ನಾಟಕ ವಸ್ತುವಿಗೂ ಒಂದಕ್ಕೊಂದಕ್ಕೆ ಸಂಬಂಧವಿಲ್ಲ. ಯಾರೋ ಶಾಸ್ತ್ರಿ ಒಬ್ಬ ಹುಡುಗನ್ನ ಒಬ್ಬ ಹುಡುಗೀಗೆ ತಂದು ಗಂಟ್ಹಾಕ್ತಾನೆ. ಅಷ್ಟೇ ವಸ್ತು. ಇದನ್ನು ಬೆಳೆಸಿರುವ ವಿಧಾನ ನೀರಸವಾಗಿದೆ. ಪಾತ್ರಧಾರಿಗಳ ಧ್ವನಿ ಎರಡೂ ಪಾಯಿ ಕ್ಲಾಸಿನಿಂದ ಮುಂದಕ್ಕೆ ಹೋಗುತ್ತಿರಲಿಲ್ಲ. ಅಲ್ಲಿ ಒಂದು ಸಾಧಾರಣ ಮನೆ ದೃಶ್ಯ. ಜಮೀನುದಾರನ ಬಂಗ್ಲೆ. ಡಾಕ್ಟರ ಪಾಪು ಈ ದೃಶ್ಯಗಳು ಬರಬೇಕಾಗಿತ್ತು. ಅದೆಲ್ಲವಕ್ಕೂ ಒಂದೇ ಸೀನು; ಒಂದೇ ಟೀಬಲ್ಲು; ಅದೇ ಟೀಬಲ್ಲು ಕ್ಲಾತು! ಇಷ್ಟೆ ಸಾಕು ಆ ನಾಟಕದ ವಿಚಾರ ಎರಡನೇದು ಛಾಯಾ ಕಲಾವಿದರ ಅನುಕೂಲಕ್ಕೊಬ್ಬಣ್ಣ ಪ್ರದರ್ಶನ. ಇವರಿಂದೂ ಎಷ್ಟು ಪ್ರಕಾರ ಒಬ್ಬರಿಂದೂ ಸ್ಟೇಜ್ ವಾಯ್ಸ್ ಇಲ್ಲ. ಅವರಾಡುತ್ತಿದ್ದ ಮಾತು ಸೈಡ್ ವಿಂಗ್ಸ್‌ನಲ್ಲಿದ್ದವರಿಗೇ ಕೇಳುತ್ತಿತ್ತೋ, ಇಲ್ಲವೋ? ಅನುಮಾನ! ಮೇಕಪ್ ಜನ್ನಾಗಿತ್ತು! ಆದರೆ ಕಪ್ಪಣ್ಣ ಪ್ರಥಮದಲ್ಲೇ ಕಲಾಪಶ್ರು ಪಂಜೆ ಉಟ್ಕೊಂಡು ಮುಂದಿನ ರಂಗೋಲ್ ರಂಗಣ್ಣನ ನೋಕಪ್ಪಿಗೆ ಅಸುಕೂಲ ಮಾಡಿಕೊಂಡಿದ್ದು ಸನ್ನಿವೇಶಕ್ಕೆ ಅಸಂಬದ್ಧವಾಗಿತ್ತು. ರಂಗ್ರು ಮೈಮೇಲೆ ವಿಭೂತಿ ಪಟ್ಟೆಗಳು ಆತಿಯಾಗಿದ್ದವು. ಯಾಕೂಬ್ ಕೇವಲ ಬಡಕಲ ಗಾಡಿ ಸಾರಥಿ. ಅವನ ಉಡುಪು ಮಾತ್ರ ರಂಗೋಲ್ ರಂಗಣ್ಣನ ಜೊಡು ಕುದುರೆ ಸಾರೋಟಿನ ಸಾರಥಿ ತರಹ ಇತ್ತು. 'ಇನ್ನು ಕಿಸಾ ಗೌತಮಿ ವಿಚಾರ ಬುದ್ಧ! ಎಳೇ ಬುದ್ಧ!! ಕಿಸಾ ಗೌತಮಿ ಬೆನ್ನು ಗೂನಿತ್ತು ಕಂತ ಗಂಡು ಕಂತ ಮೇಕಪ್‌ಮಲಿನ ಉಳಿದ ವಿನುರ್ಷೆಗೆ ಈ ಲೇಖನದಲ್ಲಿ ಎಡೆಯಿಲ್ಲ. ಒಟ್ಟನಲ್ಲಿ ಇದು ವಿವಿಧ ಕೊರತೆಯ ಧಾವಳಿಯೋ? ವಿನೋದದ ಹಾವಳಿಯೋ ಆಗಿತ್ತೆ. ಪೊರಕು ಕಲಾದೃಷ್ಟಿಯಿಂದ ನೋಸ್ಟೆ. ಇವೆಲ್ಲಾ ನಿನ್ನೆ ರಂಗಾಚಾರ್ಲು ಪುರಭವನದಲ್ಲಿ ನಡೆಯಿತು. ಇಂಥಾ ಏರ್ಪಾಡುಗಳ ವ್ಯವಸ್ಥಾಕಾರ್ಯ ಇನ್ನು ಮುಂದಾದರೂ ಅಚ್ಚುಕಟ್ಟಾಗಿ ನಡೆಯಲಿ. ವ್ಯವಸ್ಥಾಪಕರಿಗೆ ನಾಲ್ಕು ನಿಟ್ಟಿನ ನೋಟವಿಂಲಿ ಎಲ್ಲರೂ ಎಲ್ಲಾ ವಿಧದಲ್ಲೂ ಪ್ರಗತಿಗೊಳ್ಳಲಿ ಇಷ್ಟೆ ನಮ್ಮ ಹಾರೈಕೆ. ಈ ಅವಾಂತರಗಳು ತಪ್ಪುವುದೆಂದು?

ವಿನೋದ್

ಕಲ್ಕತ್ತೆದಲ್ಲಿ ಗೋಲೀಬಾರು

ಕಲ್ಕತ್ತಾ ಫೆ, 12— ಐ. ಎನ್. ಎ. ಕ್ಯಾ॥ ಅಬ್ದುಲ್ ರಷೀದಿಗೆ ವಿಧಿಸಿರುವ ಶಿಕ್ಷೆಯನ್ನು ಪ್ರತಿಭಟಿಸಲು ನಡೆದ ಮೆರವಣಿಗೆ ಏರ್ಪಾಡನ್ನು ತಡೆಯಲು ಪೋಲೀಸಿನವರೂ ಗುಂಡು ಹಾರಿಸಿದರು.

ಗಾಂಧೀಜಿಯವರ ಸಲಹೆ

ವಾರ್ಧಾಗ್ರಾಜ್ ಫೆ 12— ದೇಶದ ಆಹಾರ ದುಸ್ಥಿತಿಯನ್ನು ನಿವಾರಿಸಲು ರಾಷ್ಟ್ರೀಯ ಸರಕಾರ ಸ್ಥಾಪನೆಯೇ ಸರಿಯಾದ ಮದ್ದು ಎಂದು ಗಾಂಧೀಜಿಯವರ ಸಲಹೆಯಾಗಿದೆ.

ಐ. ಎನ್. ಎ. ಜನರನ್ನು ಬಿಡಿ

ನವದೆಹಲಿ ಫೆ, 11—ಎಲ್ಲಾ ಐ. ಎನ್. ಎ. ಜನರನ್ನು ಬಿಟ್ಟು ಬಿಡಬೇಕೆಂದು ಕೇಂದ್ರ ಅಸೆಂಬ್ಲಿಯು ಒತ್ತಾಯ ಪಡಿಸಲಾಯಿತು. ಈ ಸಂಬಂಧದಲ್ಲಿ ಸರಕಾರದ ನೀತಿಯು ಖಂಡಿಸಲಾಯಿತು.

ಪ್ರೈ॥ ಟ್ರೂಮ್ಯಾನ್

ಚಿಕಾಗೋ ಫೆ, 11—ಪ್ರೈ॥ ಟ್ರೂಮ್ಯಾನ್ರು 1948 ರ ಅಧ್ಯಕ್ಷ ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲುವುದಿಲ್ಲವೆಂದು ಹೇಳಲಾಗಿದೆ.

ನೋಟುಗಳ ಪ್ರಕರಣ

ನವದೆಹಲಿ ಫೆ. 12 ಜನವರಿ 11 ರಲ್ಲಿ 143,97, 0,000 ರೂಗಳ ಹೆಚ್ಚು ಮೌಲ್ಯದ ನೋಟುಗಳು ಚಾಲನೆಯಲ್ಲಿದ್ದವೆಂದೂ ಜನವರಿ 12 ರಿಂದ 26 ರವರೆಗೆ ರಿಜರ್ವ್ ಬ್ಯಾಂಕು ಮತ್ತು ಷೆಡ್ಯುಲ್ಡ್ ಬ್ಯಾಂಕುಗಳ ಮೂಲಿಕ 101,70, 20 500, ರೂಗಳ ಹೆಚ್ಚು ಮೌಲ್ಯದ ನೋಟುಗಳು ಒದಲಾಯಿಸಿತೆಂದೂ ಅಸೆಂಬ್ಲಿಯಲ್ಲಿ ಫೈನಾನ್ಸ್ ಮೆಂಬರು ತಿಳಿಸಿದರು.

ರೇಷ್ಮೆ ಖೋತಾದಿಂದ ಲಾಭ

ಮದರಾಸು ಫೆ, 12—ರೇಷ್ಮೆನ್ನಿಲ್ಲಿ ಶೇಕಡಾ 25 ಖೋತಾ ಮಾಡುವುದೆಂದರೆ 25 ಲಕ್ಷ ಟನ್ ಆಹಾರ ಉಳಿತಾಯವಾಗುವುದೆಂದು ಹೇಳಲಾಗಿದೆ.

ವಿವಿಧ ವರ್ತಮಾನ

ಡಬ್ಲಿನ್ ಫೆ, 11—ಮೈಸೂರು ಕಾಂಗ್ರೆಸ್ಸಿನ ಮುಖಂಡರಾದ ಶ್ರೀ ಕೆ. ಸಿ. ರೆಡ್ಡಿಯವರ ದಿವಿಲಾಲರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರೆಂದು ತಿಳಿದು ಬಂದಿದೆ.

ಅಲಹಾಬಾದ್, ಫೆ 10 — ಅಳ್ವಾರಿನಲ್ಲಿ ಈಚೆಗೆ ದಸ್ತಗಿರಿ ಮಾಡಲ್ಪಟ್ಟ ಪ್ರಜಾ ಮಂಡಲ ಕಾರ್ಯಕರ್ತರು ಏನೊಂದು ಸರತ್ತಿಲ್ಲದೆ ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಕೊಟ್ಟಿಕಲ್ ಫೆ 11— ಮಾನವ ಸೌಖ್ಯವೇ ಆಯುರ್ವೇದದ ಗುರಿಯಾಗಿದೆ ಎಂದು ಡಾ॥ ಲಕ್ಷ್ಮೀಸತಿಯವರು ಮಾಡಿದ ಭಾಷಣದಲ್ಲಿ ತಿಳಿಸಿದರು.

ಕಲ್ಲಿಕೋಟೆ, ಫೆ 9 — ಡಾ॥ ಲೀಫರ್ ಮಾಡಿದ ಭಾಷಣದಲ್ಲಿ ಪಾಕಿಸ್ತಾನವು ಇಸ್ಲಾಂ ಅನುಕೂಲಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು.

ಕೈರೋ, ಫೆ 10 — ಈಜಿಪ್ಟಿನಲ್ಲಿ ವಿದ್ಯಾರ್ಥಿಗಳು ಬ್ರಿಟಿಷರ ವಿರುದ್ಧ ಚಳುವಳಿ ಎಬ್ಬಿಸಿ ಮೆರವಣಿಗೆ ನಡೆಸಿದಾಗ ಪೋಲಿಸರು ಗುಂಡು ಹಾರಿಸಿದರು.

ನವದೆಹಲಿ, ಫೆ 11 — ಭಾರತದ ಆಹಾರಾಭಾವ ವಿಷಯದಲ್ಲಿ ವೈಸ್ರಾಯರು ಭಾರತ ಮುಖಂಡರೊಡನೆ ಮಾತುಕತೆ ನಡೆಸುವರು. ಗಾಂಧೀಜೀ ಮತ್ತು ಜಿನ್ನಾರವರು ಸಲಹೆ ಕೇಳಿರುವರು.

ನಗರ ವಾರ್ತೆ

ಮೈಸೂರು ಫೆ 13 ಮುಂಬರಲಿರುವ ಶಾಲಾ ಪರೀಕ್ಷೆಗಳಲ್ಲಿ ಕೂಡುವ ವಿದ್ಯಾರ್ಥಿಗಳ ಉಪಹಾರ ನಿಧಿಗಾಗಿ ನಿನ್ನೆ ರಾತ್ರಿ ಟೌನ್ ಹಾಲಿನಲ್ಲಿ ಶ್ರೀ ರಾಮಚಂದ್ರರಾವ್ ಭೊಂಭೊರೆಯವರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿಯೊಂದು ನಡೆಯಿತು. ನಿಧಿಗೆ ಸಮಾರು ಸಾವಿರ ರೂ ಶೇಖರವಾಯಿತೆಂದು ತಿಳಿದು ಬರುತ್ತೆ.

ಮೈಸೂರಿನ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಮೈಸೂರು ಪೌರಸಭಾ ಕಾಂಗ್ರೆಸ್ ಪಕ್ಷದವರು ಕೋರಿಕೆಯಂತೆ ಇದೇ ತಾ॥ 20 ರಲ್ಲಿ ಪೌರಸಭೆಯ ವಿಶೇಷಾಧಿದೇಶನವನ್ನು ಕರೆದಿರುವರು.

ನಿವೃತ್ತ ಅರಮನೆ ಧರ್ಮಾಧಿಕಾರಿಗಳಾದ ಶ್ರೀ ಕೃಷ್ಣಶಾಸ್ತ್ರಿಗಳು ಈ ಬಿಳಿಗ್ಗೆ ತಮ್ಮ ಸ್ವಗೃಹದಲ್ಲಿ ನೂರನೆ ವಯಸ್ಸಿನಲ್ಲಿ ಸಿಧನರಾದರೆಂದು ತಿಳಿಯಬಂದಿದೆ — ಮೈಸೂರು, ಫೆ 13

ಕಂದಾಯ ಮಾಫಿ

ಪುದುಕೋಟೆ, ಫೆ 9 — ಮಳೆಯಾಗದೆ ಬೆಳೆಯಾಗದೆ ಇರುವ 63 ಹಳ್ಳಿಗಳಲ್ಲಿ ಕಂದಾಯ ಮಾಫಿ ಮಾಡಲಾಗಿದೆ. ಗೋಧಿಯನ್ನು ಸರ್ಕಾರದ ಅಪ್ಪಣೆಯಿಲ್ಲದೆ ಹೊರಕ್ಕೆ ರವಾನೆ ಮಾಡಬಾರದೆಂದೂ ಹುಕುಂ ಮಾಡಲಾಗಿದೆ.

At Opera —
From 7–2–46
ಪರಂಜ್ಯೋತಿ

(ತಮಿಳು ಚಿತ್ರ)

ವಿ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧ್ಯೆ ಪಾತ್ರಧಾರರು
ಪ್ರತಿದಿನ ಮೂರು ಆಟಗಳು

ಹಸಕ ಬಿಟ್ಟದಪ್ಪುಂದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಸ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

At Ranjit
ANDHERA

ತಾ|| 8—2—46 ರಿಂದ
ಸಿತಾರ, ಅರೂಣಾ, ಕೆ. ಸಿ. ಡೇ
ಪಾತ್ರವಹಿಸಿರುವ
ಅಂಧೇರಾ
ಪ್ರತಿ ದಿನ 3 ಆಟಗಳು



ಪಾರ್ಲಿಮೆಂಟರಿ ಪ್ರತಿನಿಧ್ಯದ ಸಿಕಲ್ಸ್ ಬಾಂಬೆ ಪತ್ರಿಕೋದ್ಯಮಿಗಳೊಡನೆ

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ-
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಚಿತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಅಳಿ. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ – ಧಾತುಪುಷ್ಟಿಗೆ
ಸಂಜೀವನ
ಶಕ್ತಿಸುಧಾ

ಬೆಲೆ ಡಬ್ಬಿಗೆ ಕ್ಕೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

ನಂಜನಗೂಡಿನಲ್ಲಿ ಮಹಾರುದ್ರಹೋಮ

ತಾ || 10–2–46 ರಿಂದ 22–2–46 ರವರೆಗೆ 11 ದಿನಗಳು

ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನದ ಎದುರು ಮಂಟಪದಲ್ಲಿ ನಡೆಯುವುದು. ಕಾರ್ಯಕ್ರಮ :—ಪ್ರತಿ ನಿತ್ಯವೂ ಪ್ರಾತಃಕಾಲ 8|| ಘಂಟೆಯಿಂದ ರುದ್ರಾರ್ಚನ ಪುರಸ್ಸರ ಮಹಾರುದ್ರಹೋಮ ಪೂರ್ಣಾಹುತಿ ಮತ್ತು ಪ್ರತ್ಯೇಕ ನವಗ್ರಹ ಹೋಮ. ಆಸ್ತಿಕ ಮಹನೀಯರು ದಯಮಾಡಿಸಿ ದರ್ಶನ ಲಾಭ ಹೊಂದಿ ಈಶ್ವರಾನುಗ್ರಹಕ್ಕೆ ಪಾತ್ರರಾಗಲು ಇದೊಂದು ಸುಸಮಯ ದೇಶಕ್ಷೇಮವನ್ನೇ ಮುಖ್ಯ ಧ್ಯೇಯವಾಗಿಟ್ಟು ಪ್ರಾರಂಭಿಸಿರುವ ಈ ಮಹತ್ಕಾರ್ಯವು ಶ್ರೀಮಂತರ ಉದಾರ ಸಹಾಯದಿಂದಲೇ ಯಶಸ್ವಿಯಾಗಿ ನಡೆಯಬೇಕಾಗಿದೆ.

ಬಿ. ವಿ. ಪಂಡಿತರು,
ಮಹಾರುದ್ರಹೋಮ ಸಮಿತಿ
ಪ್ರೆಸಿಡೆಂಟ್ ನಂಜನಗೂಡು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing
L. N. Press
Sriramp at MYSORE